ಕೇಂದ್ರ ಜಲ ಆಯೋಗದಿಂದ ತೀರುವಳಿ ಪಡೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶಿಂಷಾ ನದಿಯಿಂದ ಕೆರೆಗಳಿಗೆ ನೀರು

285 : (140)

ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು)

ಪ್ರಶ್ನೆ

ಅ) ಮದ್ದೂರು ತಾಲ್ಲೂಕು ಲಕ್ಷ್ಮೀಪುರ, ಮಾದನಾಯಕನಹಳ್ಳಿ, ತಿಪ್ಪೂರು, ಮಾದಾಪುರ ದೊಡ್ಡಿ ಮತ್ತು ಬ್ಯಾಡರಹಳ್ಳಿ ಕೆರೆಗಳಿಗೆ ಶಿಂಷಾ ನದಿಯಿಂದ ಏತ ನೀರಾವರಿ ಮೂಲಕ ನೀರು ತುಂಬಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಾಮಗಾರಿಗೆ ಸರ್ಕಾರ ಅಂದಾಜು ಪಟ್ಟಿ ತಯಾರಿಸಿ ಆಡಳಿತಾತ್ಮಕ ಅನುಮೋದನೆ ನೀಡಿದೆಯೇ?

ಇ) ಹಾಗಿದ್ದಲ್ಲಿ, ಈ ಕಾಮಗಾರಿಗೆ ಸರ್ಕಾರ ನಿಗದಿಪಡಿಸಿರುವ ಅಂದಾಜು ಮೊತ್ತವೆಷ್ಟು?

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಇಂತಹ ಪ್ರಸ್ತಾವನೆ ಇಲ್ಲ.
ಆ) ಉದ್ಭವಿಸುವುದಿಲ್ಲ.
ಇ) ಉದ್ಭವಿಸುವುದಿಲ್ಲ.
ಈ) ಉದ್ಭವಿಸುವುದಿಲ್ಲ.

ಕನ್ನಂಬಾಡಿಯ ಕೊನೆ ಭಾಗದ ರೈತರಿಗೆ ಆಗುತ್ತಿರುವ ನೀರಿನ ಬವಣೆ, ನಾಲೆಗಳ ಆಧುನೀಕರಣ

317 : (295)

ಶ್ರೀ ನರೇಂದ್ರ ಸ್ವಾಮಿ ಪಿ.ಎಂ. (ಮಳವಳ್ಳಿ)

ಪ್ರಶ್ನೆ

ಅ) ಮಳವಳ್ಳಿ ತಾಲ್ಲೂಕಿನ ಕನ್ನಂಬಾಡಿಯ ಕೊನೆಭಾಗದ ರೈತರಿಗೆ ಆಗುತ್ತಿರುವ ನೀರಿನ ಬವಣೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ನಾಲೆ ಆಧುನೀಕರಣ ಕಾಮಗಾರಿಗಾಗಿ ಕೈಗೆತ್ತಿಕೊಂಡಿರುವ ನಾಲೆಗಳಾವುವು.

ಇ) ಇದರಲ್ಲಿ ಅನುದಾನ ಬಿಡುಗಡೆಯಾಗಿರುವ ಕಾಮಗಾರಿಗಳೆಷ್ಟು (ನಾಲಾವಾರು ವಿವರ ನೀಡುವುದು)?

ಈ) ಮಳವಳ್ಳಿ ತಾಲ್ಲೂಕು ಬಿ.ಜಿ.ಪುರ ಏತ ನೀರಾವರಿ ಯೋಜನೆ 2010ರ ಬಜೆಟ್‌ನಲ್ಲಿ ಘೋಷಣೆಯಾಗಿದ್ದರೂ ಇನ್ನೂ ಆ ಪ್ರದೇಶದ ಯೋಜನೆ ಕೈಗೆತ್ತಿಕೊಳ್ಳಲು ಆಗಿರುವ ವಿಳಂಬಕ್ಕೆ ಕಾರಣವೇನು?

ಉ) ಈ ಯೋಜನೆಗೆ ತಾಂತ್ರಿಕ ಅನುಮೋದನೆ ಹಾಗೂ ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಊ) ಹಾಗಿದ್ದಲ್ಲಿ, ಜನ ಜಾನುವಾರುಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಕೃಷ್ಣರಾಜಸಾಗರ ಯೋಜನೆಯ ವಿಶ್ವೇಶ್ವರಯ್ಯ ನಾಲಾಜಾಲದ ಅಡಿಯಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಹೆಬ್ಬಕವಾಡಿ ಶಾಖಾ ನಾಲೆ, ನಿಡಘಟ್ಟ ಶಾಖಾ ನಾಲೆ, ಹೆಬ್ಬಳ್ಳ ಚೆನ್ನಯ್ಯನ ಶಾಖಾ ನಾಲೆ ಮತ್ತು ಕೆಲವು ಪಿಕಪ್ ನಾಲೆಗಳು ಬರುತ್ತವೆ. ದೀರ್ಘಕಾಲದ ಸತತ ಬಳಕೆಯಿಂದಾಗಿ ಇವುಗಳಲ್ಲಿ ಹಲವು ನಾಲೆಗಳು ಅಲ್ಲಲ್ಲಿ ಮೂಲ ಆಕಾರ ಕಳೆದ ಕೊಂಡು ನಾಲೆಯ ಕೊನೆಯ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ಮಳೆಗಾಲದ ನಂತರ ಸಕಾಲದಲ್ಲಿ ನೀರನ್ನು ಒದಗಿಸಲು ತೊಂದರೆಯಾಗುತ್ತಿದೆ. ಆದರೂ ಸಹಾ ನೀರಿನ ಸೂಕ್ತ ನಿಯಂತ್ರಣದ ಮೂಲಕ ಈ ನಾಲೆಗಳ ಅಡಿಯ ಅಚ್ಚುಕಟ್ಟು ಪ್ರದೇಶಗಳಿಗೆ ವ್ಯವಸ್ಥಿತವಾಗಿ ನೀರನ್ನು ಹರಿಸಲಾಗುತ್ತಿದೆ. ಅಲ್ಲದೆ, ನಾಲೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳಿಗೆ ನೀರನ್ನು ತುಂಬಿಸಲಾಗಿರುತ್ತದೆ.

ಆದರೂ ಸಹಾ ದೀರ್ಘಕಾಲದ ಸತತ ಬಳಕೆಯಿಂದ ವಿಶ್ವೇಶ್ವರಯ್ಯ ನಾಲಾಜಾಲದ ಶಾಖಾ ನಾಲೆಗಳು/ಆಯ್ದ ಕೆಲವು ವಿತರಣಾ ನಾಲೆಗಳು ಇದೇ ರೀತಿಯಲ್ಲಿ ತಮ್ಮ ಮೂಲ ಆಕಾರವನ್ನು ಕಳೆದುಕೊಂಡಿರುವ ಹಿನ್ನೆಲೆಯಲ್ಲಿ

ಅಂತಹ ಆಯ್ದ ನಾಲೆ/ನಾಲೆಯ ಭಾಗಗಳನ್ನು ಗುರುತಿಸಿ, ಅವುಗಳನ್ನು ಅಭಿವೃದ್ಧಿಗೊಳಿಸಲು 11 ಪ್ಯಾಕೇಜ್‌ಗಳಲ್ಲಿ ತಯಾರಿಸಲಾದ ರೂ.330.00 ಕೋಟಿ ವಿಸ್ತೃತ ಯೋಜನಾ ವರದಿಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ. ಈ ಯೋಜನಾ ವರದಿಯಲ್ಲಿ ಮಳವಳ್ಳಿ ತಾಲ್ಲೂಕಿಗೆ ಸೇರಿದ ವಿಶ್ವೇಶ್ವರಯ್ಯ ನಾಲಾಜಾಲದ ಹೆಬ್ಬಕವಾಡಿ ಶಾಖಾ ನಾಲೆ, ನಿಡಘಟ್ಟ ಶಾಖಾ ನಾಲೆ ಮತ್ತು ಹೆಬ್ಬಳ್ಳ ಚೆನ್ನಯ್ಯನ ಶಾಖಾ ನಾಲೆಗಳು ಮತ್ತು ಆಯ್ದ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿ ಸಹ ಸೇರಿದ್ದು, ಇವುಗಳ ವಿವರ ಈ ರೀತಿ ಇದೆ;

ಕ್ರ.ಸಂ	ನಾಲೆ	ಸರಪಳಿ
1	ನಿಡಘಟ್ಟ ಶಾಖಾ ನಾಲೆ	11.000 ರಿಂದ 14.705 ಕಿ.ಮೀ.
2	ಹೆಬ್ಬಕವಾಡಿ ಶಾಖಾ ನಾಲೆಯ ವಿತರಣಾ ನಾಲೆ ಸಂಖ್ಯೆ 10	0.000 ರಿಂದ 2.256 ಕಿ.ಮೀ.
3	ಹೆಬ್ಬಕವಾಡಿ ಶಾಖಾ ನಾಲೆಯ ವಿತರಣಾ ನಾಲೆ ಸಂಖ್ಯೆ 17	0.000 ರಿಂದ 2.670 ಕಿ.ಮೀ.
4	ಹೆಬ್ಬಳ್ಳ ಚನ್ನಯ್ಯ ಶಾಖಾ ನಾಲೆಯ ವಿತರಣಾ ನಾಲೆ ಸಂಖ್ಯೆ 20	0.000 ರಿಂದ 8.297 ಕಿ.ಮೀ.
5	ಹೆಬ್ಬಳ್ಳ ಚನ್ನಯ್ಯ ಶಾಖಾ ನಾಲೆಯ ವಿತರಣಾ ನಾಲೆ ಸಂಖ್ಯೆ 24	0.000 ರಿಂದ 8.128 ಕಿ.ಮೀ.

ಆ) ಕೃಷ್ಣರಾಜಸಾಗರ ಯೋಜನೆಯ ವಿಶ್ವೇಶ್ವರಯ್ಯ ನಾಲಾ ಜಾಲದ ಆಯ್ದ ನಾಲೆಗಳಲ್ಲಿ ಅಭಿವೃದ್ಧಿ ಅಗತ್ಯವಿರುವ ಭಾಗಗಳನ್ನು ಗುರುತಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ 11 ಪ್ಯಾಕೇಜ್‌ಗಳಲ್ಲಿ ತಯಾರಿಸಲಾದ ರೂ.330.00 ಕೋಟಿ ಮೊತ್ತದ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರೆಕಿದ್ದು, ಇದರಲ್ಲಿ ಸೇರ್ಪಡೆಯಾಗಿರುವ ಒಟ್ಟಾರೆ 452 ಕಿ.ಮೀ. ಉದ್ದದ ಶಾಖಾ ನಾಲೆಗಳು ಮತ್ತು ಆಯ್ದ ವಿತರಣಾ ನಾಲೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಅನುಬಂಧದಲ್ಲಿ ನೀಡಿರುವ ಪಟ್ಟಿಯಲ್ಲಿರುವ ಕಾಮಗಾರಿಗಳಿಗೆ 2012–13ನೇ ಸಾಲಿನಲ್ಲಿ ಒದಗಿಸಿರುವ ಅನುದಾನದ ವಿವರವನ್ನು ನಮೂದಿಸಲಾಗಿದೆ.

ಈ) ಮಳವಳ್ಳಿ ತಾಲ್ಲೂಕಿನ ಬಿ.ಜಿ ಪುರ ಏತ ನೀರಾವರಿ ಯೋಜನೆ ಎಂಬ ಹೆಸರಿನ ಯಾವುದೇ ಯೋಜನೆ ಇಲ್ಲ. ಆದರೆ, 2009–10 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಯ ಸಂದರ್ಭದ ಹೆಚ್ಚುವರಿ ಘೋಷಣೆಗಳ ಅಂಶದಲ್ಲಿ ಪೂರಿಗಾಲಿ ಏತ ನೀರಾವರಿ ಯೋಜನೆ ಸೇರಿದ್ದು, ರೂ.5.00 ಕೋಟಿ ಅನುದಾನ ಒದಗಿಸಲಾಗುವುದೆಂದು ತಿಳಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಅದರಂತೆ, 4084 ಹೆಕ್ಟೇರ್ ಪ್ರದೇಶಕ್ಕೆ ಖಾರೀಫ್ ಅವಧಿ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಿರುವ ಈ ಯೋಜನೆಗೆ 0.532

ಟಿ.ಎಂ.ಸಿ ನೀರಿನ ಅಗತ್ಯತೆ ಇದೆ. ಆದರೆ, ಇದು ಹೊಸದಾಗಿ ತೆಗೆದುಕೊಳ್ಳಲು ಉದ್ದೇಶಿಸಿರುವ ನೀರಾವರಿ ಯೋಜನೆ ಆಗಿದ್ದು, ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪಿನಲ್ಲಿ ಈ ಏತ ನೀರಾವರಿ ಯೋಜನೆಗೆ ನೀರಿನ ಹಂಚಿಕೆ ಇರುವುದಿಲ್ಲ. ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪಿನ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರವು ದಾಖಲಿಸಿರುವ ಎಸ್.ಎಲ್.ಪಿ ಹಿನ್ನೆಲೆಯಲ್ಲಿ ಈ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ.

ಊ) ಮೇಲೆ ತಿಳಿಸಿರುವ ಕಾರಣಗಳಿಂದ ಈವರೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.

ಋ) ಬವಣೆಗೊಳಗಾದ ಜನ-ಜಾನುವಾರುಗಳ ಕುಡಿಯುವ ನೀರಿನ ಅವಶ್ಯಕತೆ ಮತ್ತು ನೀರಿನ ಲಭ್ಯತೆಯನ್ನು ಪರಿಶೀಲಿಸಿ ಕುಡಿಯುವ ನೀರನ್ನು ಮಳವಳ್ಳಿ ತಾಲ್ಲೂಕಿನ ಕೆಲವು ಕೆರೆಗಳಿಗೆ ಒದಗಿಸುವ ಸಲುವಾಗಿ ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ನರೇಂದ್ರ ಸ್ವಾಮಿ ಪಿ.ಎಂ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:295 ಕ್ಕೆ ಅನುಬಂಧ

2012-13ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಿಶ್ವೇಶ್ವರಯ್ಯ ನಾಲಾಜಾಲದ ವಿವಿಧ ಶಾಖಾ ಹಾಗೂ ವಿತರಣಾ ನಾಲೆಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ	ನಾಲೆಯ ಹೆಸರು	ಅಂದಾಜು ಮೊತ್ತ	ಅನುದಾನ
1	ಎಡದಂಡೆ ಕೆಳಮಟ್ಟದ ನಾಲೆ ವಿಶ್ವೇಶ್ವರಯ್ಯ ಮುಖ್ಯ ನಾಲೆಯ 13ಎ, 20&24ನೇ ವಿತರಣಾ ನಾಲೆ	3630.00	1030.00
2	ಹಳೇ ಮದ್ದೂರು ಶಾಖಾ ನಾಲೆ	2781.00	926.35
3	ಶಿಂಷಾ ಶಾಖಾ ನಾಲೆ & ವಿತರಣಾ ನಾಲೆಗಳು	3486.50	1152.11
4	ಕೌಡ್ಲೆ ಶಾಖಾ ನಾಲೆ, ವಿತರಣಾ ನಾಲೆಗಳು & ಮೈನರ್‌ಗಳು	3246.00	1075.15
5	ಹೊಸ ಮದ್ದೂರು ಶಾಖಾ ನಾಲೆ & ವಿತರಣಾ ನಾಲೆಗಳು	3513.50	1160.75
6	ಕೆರಗೋಡು ಶಾಖಾ ನಾಲೆ & ವಿತರಣಾ ನಾಲೆಗಳು	4236.50	1392.11
7	ಕಾವೇರಿ ಶಾಖಾ ನಾಲೆ & ವಿತರಣಾ ನಾಲೆಗಳು	6696.50	2179.31
8	ಲೋಕಸರ ಶಾಖಾ ನಾಲೆ & ವಿತರಣಾ ನಾಲೆಗಳು	1850.00	628.43
9	ನಿಡಘಟ್ಟ ಶಾಖಾ ನಾಲೆ & ಹೆಬ್ಬಕವಾಡಿ ಶಾಖಾ ನಾಲೆಯ ವಿತರಣಾ ನಾಲೆಗಳು	253.00	85.83
10	ಹೆಬ್ಬಳ್ಳ ಚೆನ್ನಯ ನಾಲೆಯ ವಿತರಣಾ ನಾಲೆಗಳು	1237.50	424.23
11	ತುರುಗನೂರು ಶಾಖಾ ನಾಲೆಯ ವಿತರಣಾ ನಾಲೆಗಳು & ಮೈನರ್‌ಗಳು	1141.00	272.00
	ಒಟ್ಟು	**32071.50**	**10326.27**

(ಎನ್.ಆರ್.ವಿಜಯಸಾರಥಿ)
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಐ-3),